## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ಮಹದಾಯಿ ಜಲ ವಿವಾದ - ಉಪ ತಾಂತ್ರಿಕ ಸಲಹೆಗಾರರುಗಳಿಗೆ ವೃತ್ತಿ ಶುಲ್ಕ ಹಾಗೂ ಇತರ ಸೌಲಭ್ಯಗಳನ್ನು ನಿಗದಿಪಡಿಸುವ ಬಗ್ಗೆ.

***

ಓದಲಾಗಿದೆ: 1) ಮುಖ್ಯ ಇಂಜಿನಿಯರ್ (ಅಂತರ ರಾಜ್ಯ ಜಲ), ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಇವರ ಪತ್ರ ಸಂ: ಜಸಅ/ಕೃಗೋಅ/ಸಿ1/1124/2017-18/700 ದಿನಾಂಕ:17.10.2018.

2) ಸರ್ಕಾರದ ಆದೇಶ ಸಂ: ಜಸಂಇ 37 ಮವಿಇ 2018 ದಿನಾಂಕ:19.01.2019.

3) ಮುಖ್ಯ ಇಂಜಿನಿಯರ್ (ಅಂತರ ರಾಜ್ಯ ಜಲ), ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಇವರ ಪತ್ರ ಸಂ: ಜಸಂಅ/ಕೃಗೋಅ/626 (ಭಾಗ-5)/ಬಿಪ/2018-19/835 ದಿನಾಂಕ:29.01.2019.

ಪ್ರಸ್ತಾವನೆ:

ಮಹದಾಯಿ ಜಲ ವಿವಾದದ ವಿಷಯದಲ್ಲಿ ಬೆಂಗಳೂರು ಹಾಗೂ ನವದೆಹಲಿಯಲ್ಲಿ ನ್ಯಾಯಾಧಿಕರಣ/ಸರ್ವೋಚ್ಚ ನ್ಯಾಯಾಲಯದಲ್ಲಿನ ಪ್ರಕರಣಗಳ ಕುರಿತು ಕಾನೂನು/ತಾಂತ್ರಿಕ ತಂಡವು ನಡೆಸುವ ಚರ್ಚಾ ಸಭೆಗಳಲ್ಲಿ ಭಾಗವಹಿಸಿ ಅಗತ್ಯ ನೆರವು ನೀಡಲು ಹಾಗೂ ಜಲ ವಿವಾದಕ್ಕೆ ಸಂಬಂಧಿಸಿದ ಇತರೆ ಕರ್ತವ್ಯಗಳನ್ನು ನಿರ್ವಹಿಸುವ ಸಲುವಾಗಿ, ಮುಂದಿನ ಆದೇಶ ಹೊರಡಿಸುವವರೆಗೆ ಶ್ರೀ ಶಿವರುದ್ರಪ್ಪ, ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ), ಬೆಂಗಳೂರು ಹಾಗೂ ಶ್ರೀ ಎನ್.ಮೃತ್ಯುಂಜಯ, ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ), ಬೆಂಗಳೂರು ಇವರುಗಳನ್ನು ಉಪ ತಾಂತ್ರಿಕ ಸಲಹೆಗಾರರನ್ನಾಗಿ ಮೇಲೆ ಓದಲಾದ ಕ್ರಮಸಂಖ್ಯೆ (2)ರ ಆದೇಶದಲ್ಲಿ ನೇಮಕ ಮಾಡಲಾಗಿರುತ್ತದೆ.

2. ದಿನಾಂಕ:23.01.2019ರಂದು ಶ್ರೀ ಶಿವರುದ್ರಪ್ಪ, ಕಾರ್ಯಪಾಲಕ ಇಂಜಿನಿಯರ್(ನಿವೃತ್ತ) ಹಾಗೂ ದಿನಾಂಕ:28.01.2019ರಂದು ಶ್ರೀ ಎನ್. ಮೃತ್ಯುಂಜಯ, ಕಾರ್ಯಪಾಲಕ ಇಂಜಿನಿಯರ್(ನಿವೃತ್ತ) ಇವರುಗಳು ಮಹದಾಯಿ ಜಲ ವಿವಾದ ಸಂಬಂಧ ಉಪತಾಂತ್ರಿಕ ಸಲಹೆಗಾರರಾಗಿ ಮುಖ್ಯ ಇಂಜಿನಿಯರ್ (ಅಂರಾಜ), ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಬೆಂಗಳೂರು ಇವರ ಕಛೇರಿಯಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುವುದಾಗಿ ಮುಖ್ಯ ಇಂಜಿನಿಯರ್‌ರವರು ಮೇಲೆ ಓದಲಾದ ಕ್ರಮಸಂಖ್ಯೆ (3)ರ ಪತ್ರದಲ್ಲಿ ವರದಿ ಮಾಡಿರುತ್ತಾರೆ.

3. ಮಹದಾಯಿ ಜಲ ವಿವಾದದ ಸಂಬಂಧದಲ್ಲಿ ದಿನಾಂಕ:19.01.2019ರ ಸರ್ಕಾರದ ಆದೇಶದಲ್ಲಿ ನೇಮಕ ಮಾಡಲಾಗಿರುವ ಉಪ ತಾಂತ್ರಿಕ ಸಲಹೆಗಾರರುಗಳಿಗೆ ನೀಡಬೇಕಾದ ಸಂಭಾವನೆ ಹಾಗೂ ಇತರೆ ಸೌಲಭ್ಯಗಳ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದೆ. ಅದರಂತೆ ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

### ಸರ್ಕಾರಿ ಆದೇಶ ಸಂ: ಜಸಂಇ 37 ಮವಿಇ 2018, ಬೆಂಗಳೂರು, ದಿನಾಂಕ:18.10.2019.

ಶ್ರೀ ಶಿವರುದ್ರಪ್ಪ, ಉಪ ತಾಂತ್ರಿಕ ಸಲಹೆಗಾರರು, ಮಹದಾಯಿ ಜಲ ವಿವಾದ ಹಾಗೂ ಶ್ರೀ ಎನ್.ಮೃತ್ಯುಂಜಯ, ಉಪ ತಾಂತ್ರಿಕ ಸಲಹೆಗಾರರು, ಮಹದಾಯಿ ಜಲ ವಿವಾದ ಇವರುಗಳಿಗೆ ಕರ್ತವ್ಯ ನಿರ್ವಹಿಸಿದ ದಿನಾಂಕದಿಂದ ಕೆಳಕಂಡ ಸಂಭಾವನೆ ಹಾಗೂ ಸೌಲಭ್ಯಗಳನ್ನು ನೀಡಲು ಸರ್ಕಾರದ ಅನುಮೋದನೆ ನೀಡಲಾಗಿದೆ:

ಅ) ಮಹದಾಯಿ ಜಲ ವಿವಾದದ ಸಂಬಂಧದಲ್ಲಿ ರಾಜ್ಯದ ಒಳಗಡೆ ಕಾರ್ಯ ನಿರ್ವಹಿಸುವ ದಿನಗಳಿಗೆ ಪ್ರತಿ ದಿನಕ್ಕೆ ರೂ.3,000/-(ರೂಪಾಯಿ ಮೂರು ಸಾವಿರಗಳು ಮಾತ್ರ) ಸಂಭಾವನೆ ನೀಡುವುದು.

ಆ) ಮಹದಾಯಿ ಜಲ ವಿವಾದದ ಸಂಬಂಧದಲ್ಲಿ ರಾಜ್ಯದ ಹೊರಗೆ ಕಾರ್ಯ ನಿರ್ವಹಿಸುವ ದಿನಗಳಿಗೆ ಪ್ರತಿ ದಿನಕ್ಕೆ ರೂ.3,500/- (ರೂಪಾಯಿ ಮೂರು ಸಾವಿರದ ಐದುನೂರು ಮಾತ್ರ) ಸಂಭಾವನೆ ನೀಡುವುದು.

18/10/19

ಇ) ಪ್ರವಾಸ ಕೈಗೊಳ್ಳಬೇಕಾದ ಸಂದರ್ಭಗಳಲ್ಲಿ ಸಮೂಹ-ಎ ಗುಂಪಿನ ಅಧಿಕಾರಿಗಳಿಗೆ ಲಭ್ಯವಿರುವ ಪ್ರವಾಸ ಭತ್ಯೆ, ದಿನಭತ್ಯೆ ಹಾಗೂ ಇತರೆ ಸವಲತ್ತುಗಳನ್ನು ಒದಗಿಸುವುದು.

ಈ) ದೂರವಾಣಿ ಸೌಲಭ್ಯದ ದ್ವೈಮಾಸಿಕ ವೆಚ್ಚ (ಮೊಬೈಲ್ ವೆಚ್ಚ ಒಳಗೊಂಡಂತೆ) ವಾಸ್ತವಿಕ ವೆಚ್ಚ ಗರಿಷ್ಠ ರೂ.1,000/- (ರೂಪಾಯಿ ಒಂದು ಸಾವಿರ ಮಾತ್ರ)ಗಳಿಗೆ ಮಿತಿಗೊಳಿಸುವುದು.

ಉ) ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆಯ ಕಛೇರಿಯಲ್ಲಿ ಸೂಕ್ತ ಕಛೇರಿ ಸ್ಥಳಾವಕಾಶ ಕಲ್ಪಿಸಿಕೊಡುವುದು.

ಊ) ಮಹದಾಯಿ ಜಲ ವಿವಾದ ಸಂಬಂಧದಲ್ಲಿ ಕಛೇರಿ, ಚರ್ಚಾ ಸಭೆಗಳಿಗೆ ಹಾಜರಾಗಲು ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆಯಿಂದ ಅಗತ್ಯ ಏರ್ಪಾಡು ಮಾಡುವುದು.

2. ಈ ಸಂಬಂಧ ತಗಲುವ ವೆಚ್ಚವನ್ನು ಲೆಕ್ಕಶೀರ್ಷಿಕೆ 2701-80-001-0-19-015 ಪೂರಕ ವೆಚ್ಚಗಳು ಇದರಡಿಯಲ್ಲಿ ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆಗೆ ಲಭ್ಯವಿರುವ ಅನುದಾನದಲ್ಲಿ ಭರಿಸತಕ್ಕದ್ದು.

3. ಸದರಿ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿಗಳ ಸಂಖ್ಯೆ:ಆಇ 145 ಆಕೋ-1/2019 ದಿನಾಂಕ:12.04.2019 ಹಾಗೂ ಆಇ 455 ಆಕೋ-1/2019 ದಿನಾಂಕ:03.10.2019ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎಂ.ಎಸ್.ಮೋಹನ್) 18/10/19
ವಿಶೇಷ ಕರ್ತವ್ಯಾಧಿಕಾರಿ (ತಾಂತ್ರಿಕ-3),
ಜಲ ಸಂಪನ್ಮೂಲ ಇಲಾಖೆ.

<u>ಪ್ರತಿಯನ್ನು</u> :

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್.ಎಸ್.ಎ)/(ಇ & ಆರ್.ಎಸ್.ಎ)/(ಎ & ಇ), ಕರ್ನಾಟಕ, ಬೆಂಗಳೂರು.
2. ಮುಖ್ಯ ಇಂಜಿನಿಯರ್, ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಬೆಂಗಳೂರು.
4. ಮುಖ್ಯ ಇಂಜಿನಿಯರ್ (ಅಂತರ ರಾಜ್ಯ ಜಲ), ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಬೆಂಗಳೂರು.
5. ಶ್ರೀ ಶಿವರುದ್ರಪ್ಪ, ಉಪ ತಾಂತ್ರಿಕ ಸಲಹೆಗಾರರು.
   {ಮುಖ್ಯ ಇಂಜಿನಿಯರ್ (ಅಂರಾಜ), ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ ಇವರ ಮುಖಾಂತರ}
6. ಶ್ರೀ ಎನ್.ಮೃತ್ಯುಂಜಯ, ಉಪ ತಾಂತ್ರಿಕ ಸಲಹೆಗಾರರು.
   {ಮುಖ್ಯ ಇಂಜಿನಿಯರ್ (ಅಂರಾಜ), ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ ಇವರ ಮುಖಾಂತರ}
7. ವಿಶೇಷಾಧಿಕಾರಿ ಮತ್ತು ಪದನಿಮಿತ್ತ ಉಪ ಕಾರ್ಯದರ್ಶಿ (ಲೋಕೋಪಯೋಗಿ ಆರ್ಥಿಕ ಕೋಶ), ಆರ್ಥಿಕ ಇಲಾಖೆ.
8. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಜಲ ಸಂಪನ್ಮೂಲ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು.
9. ಸರ್ಕಾರದ ಕಾರ್ಯದರ್ಶಿಗಳು, ಜಲ ಸಂಪನ್ಮೂಲ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು.
10. ಸರ್ಕಾರದ ಹೆಚ್ಚುವರಿ ಕಾರ್ಯದರ್ಶಿಗಳು, ಜಲ ಸಂಪನ್ಮೂಲ ಇಲಾಖೆ ಇವರ ಆಪ್ತ ಸಹಾಯಕರು.
11. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.